ತರಬೇತಿ ಕಾರ್ಯಕ್ರಮಗಳನ್ನು ನಡೆಸಲು ಈ ಕೆಳಕಂಡ ಮಾನದಂಡಗಳಡಿ ಆದೇಶ ನೀಡಲಾಗಿದೆ.

1) ತರಬೇತಿ ಕೇಂದ್ರವು ಕನಿಷ್ಠ 25 ಯಾಂತ್ರೀಕೃತ ಹೊಲಿಗೆ ಯಂತ್ರಗಳನ್ನು ಹೊಂದಿರತಕ್ಕದ್ದು.
2) ತರಬೇತಿ ಕಾರ್ಯಕ್ರಮ ನಡೆಸಲು ಕನಿಷ್ಠ 1400 ಚ.ಅಡಿ. ಕಟ್ಟಡ ಹೊಂದಿರಬೇಕು.
3) ತರಬೇತಿ ಕೇಂದ್ರದಲ್ಲಿ ನುರಿತ ತರಬೇತುದಾರರಿದ್ದು, ಟಿಓಟಿ ತರಬೇತಿಯನ್ನು ಹೊಂದಿರತಕ್ಕದ್ದು.
4) ತರಬೇತಿ ಕೇಂದ್ರ ಕಟ್ಟಡವು ಬಾಡಿಗೆ ಕಟ್ಟಡವಿದ್ದಲ್ಲಿ, ಕನಿಷ್ಠ 5 ವರ್ಷಗಳ ನೋಂದಾಯಿತ ಲೀಸ್ ಡೀಡ್ ಇರಬೇಕು.
5) ತರಬೇತಿ ಕೇಂದ್ರವು, ತರಬೇತಿ ನೀಡಿದ ಫಲಾನುಭವಿಗಳಿಗೆ ತರಬೇತಿ ನಂತರ ಉದ್ಯೋಗ ಅವಕಾಶ ಒದಗಿಸಿ ಕೊಡಲು ಇಲಾಖೆ ಯೊಂದಿಗೆ ಒಡಂಬಡಿಕೆ ಮಾಡಿ ಕೊಡಬೇಕು.
6) ತರಬೇತಿ ಕೇಂದ್ರಗಳು, ತರಬೇತಿಗೆ ಸಂಬಂಧಪಟ್ಟ ಕೈಗಾರಿಕಾ ಘಟಕಗಳೊಂದಿಗೆ ಉದ್ಯೋಗಾವಕಾಶ ಕಲ್ಪಿಸುವ ಬಗ್ಗೆ ಒಡಂಬಡಿಕೆ ಹೊಂದಿರಬೇಕು.

## ಷರತ್ತು ಮತ್ತು ನಿಬಂಧನೆಗಳು

1. ಫಲಾನುಭವಿಯು ತರಬೇತಿ ಕನಿಷ್ಠ ಶೇ.80 ರಷ್ಟು ಹಾಜರಾತಿಯಾದರೆ ಮಾತ್ರ ಶಿಷ್ಯವೇತನ ಹಾಗೂ ತರಬೇತಿ ಪ್ರಮಾಣ ಪತ್ರ ಪಡೆಯಲು ಅರ್ಹನಾಗಿರುತ್ತಾನೆ.
2. ತರಬೇತಿಗೆ ಅರ್ಹ ವಿದ್ಯಾರ್ಹತೆ ಕನಿಷ್ಠ 5ನೇ ತರಗತಿ ಉತ್ತೀರ್ಣರಾಗಿರಬೇಕು.
3. ತರಬೇತಿ ಕೇಂದ್ರದಲ್ಲಿರುವ ತರಬೇತಿ ನೀಡುವ ಶಿಕ್ಷಕರು ಕಡ್ಡಾಯವಾಗಿ ಟಿಒಟಿ ತರಬೇತಿ ಪಡೆದಿರತಕ್ಕದ್ದು.
4. ಖಾಸಗಿ ತರಬೇತಿ ಕೇಂದ್ರದವರು ತರಬೇತಿಯ ಮಾರ್ಗಸೂಚಿ ಫಲಕಗಳನ್ನು ತರಬೇತಿ ಕೇಂದ್ರಗಳಲ್ಲಿ ಹಾಕಬೇಕು.
5. ಇಲಾಖಾ ಕೌಶಲ್ಯಾಭಿವೃದ್ಧಿ ಕೇಂದ್ರಗಳಲ್ಲಿ ನಿಗದಿಪಡಿಸಿದಂತೆ ಸ್ಪೆಷಲೈಜ್ಡ್ ಮಷಿನರಿಗಳನ್ನು ಖಾಸಗಿ ತರಬೇತಿ ಕೇಂದ್ರಗಳು ಸಹ ಅಳವಡಿಸಿಕೊಳ್ಳಬೇಕು.
6. ನೂತನ ಜವಳಿ ನೀತಿ 2013-18 ರನ್ವಯ ಪ್ಯಾರ 18(ಉ) ರಲ್ಲಿ ಸೂಚಿಸಿದಂತೆ ನಿಗದಿಪಡಿಸಿದ ಸಹಾಯಧನವನ್ನು 02 ಮೈಲುಗಲ್ಲುಗಳ ಆಧಾರದ ಮೇಲೆ ಬಿಡುಗಡೆ ಮಾಡುವುದು.
7. **ಅ**] ತರಬೇತಿ ಕಾರ್ಯಕ್ರಮದ ಮುಕ್ತಾಯದ ಮೊದಲ ಮೈಲುಗಲ್ಲನ್ನು ಪೂರ್ಣ ಸಾಧಿಸಿದಾಗ ಅರ್ಹ ನಿಧಿಯ ಶೇ.50 ರಷ್ಟು ನೀಡಲಾಗುವುದು.
8. **ಆ**] ಫಲಾನುಭವಿಗಳಿಗೆ ಉದ್ಯೋಗ ಕಲ್ಪಿಸಿದ ನಂತರ 60 ದಿನ ಪೂರ್ಣಗೊಳ್ಳುವಿಕೆ 2ನೇ ಮೈಲುಗಲ್ಲಾಗುವುದು. ಅರ್ಹ ನಿಧಿಯ ಬಾಕಿ ಶೇ.50 ರಷ್ಟನ್ನು 2ನೇ ನಿಧಿಯ ಮೈಲುಗಲ್ಲನ್ನು ಸಾಧಿಸಿದಾಗಿ ಪಾವತಿ ಮಾಡಲಾಗುವುದು.
9. ಜಿಲ್ಲಾಮಟ್ಟದ ಜಂಟಿ/ಉಪ/ಸಹಾಯಕ ನಿರ್ದೇಶಕರು ರವರು ಮೇಲಿನ ಷರತ್ತುಗಳಂತೆ ಸಂಸ್ಥೆಗಳಲ್ಲಿನ ಯಂತ್ರೋಪಕರಣಗಳ ಬಗ್ಗೆ ಖಚಿತಪಡಿಸಿಕೊಳ್ಳುವುದು.
10. ಸದರಿ ನಿಯಮಗಳಂತೆ ಕ್ರಮ ಕೈಗೊಂಡ ಸಂಸ್ಥೆಗಳಿಗೆ ಮಾತ್ರ ಮಾರ್ಗಸೂಚಿಯಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಅನುಷ್ಠಾನಗೊಳಿಸಲು ಕ್ರಮವಹಿಸುವುದು.
11. ಪ್ರತಿ ತಿಂಗಳು 5ನೇ ತಾರೀಖಿನೊಳಗಾಗಿ ತರಬೇತಿ ಅನುಷ್ಠಾನದ ಪ್ರಗತಿಯನ್ನು ಸಂಸ್ಥೆವಾರು ಸಲ್ಲಿಸುವುದು.
12. ಪ್ರತಿ ಫಲಾನುಭವಿಗೆ ಒಂದರಂತೆ ಕಾರ್ಯನಿರತ ಸ್ವಿಯಿಂಗ್ ಮೆಶಿನನ್ನು ಹೊಂದಿರತಕ್ಕದ್ದು.
13. ಸ್ವಿಯಿಂಗ್ ಮೆಶಿನ್ ಅಪರೇಟರ್ ತರಬೇತಿಯನ್ನು ಗರಿಷ್ಠ 25 ಜನರ ಬ್ಯಾಚಿನಂತೆ ಅನುಷ್ಟಾನಗೊಳಿಸುವುದು.
14. ವಿದ್ಯುತ್‌ಮಗ್ಗ/ಕೈಮಗ್ಗ ತರಬೇತಿಗಳನ್ನು ಗರಿಷ್ಠ 10 ಜನರ ಬ್ಯಾಚಿನಂತೆ ಅನುಷ್ಠಾನಗೊಳಿಸುವುದು.
15. ತರಬೇತಿ ಕಾರ್ಯಕ್ರಮಗಳನ್ನು ನಿಗದಿಪಡಿಸಿದ ಅವಧಿಯೊಳಗೆ ಪೂರ್ಣಗೊಳಿಸುವುದು.
16. ಸಂಘ/ಸಂಸ್ಥೆಗಳಿಂದ ಅನುಬಂಧ-3 ರಲ್ಲಿ ಲಗತ್ತಿಸಿದ ನಮೂನೆಯಲ್ಲಿ ಮುಂಗಡ ಹಣ ರಶೀದಿಯನ್ನು ಸಲ್ಲಿಸುವುದು.
17. ಸಂಘ / ಸಂಸ್ಥೆಗಳ ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸುವುದು.
18. ಎಲ್ಲಾ ಅಭ್ಯರ್ಥಿಗಳ ಮಾಹಿತಿಯನ್ನು ಬಯೋಮೆಟ್ರಿಕ್ ಸಿಸ್ಟಮ್ ಅಳವಡಿಸಿ ಹಾಜರಾತಿಯನ್ನು ಖಚಿತ ಪಡಿಸಿಕೊಂಡು 45 ದಿನಗಳ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ಗುಣಾತ್ಮಕವಾಗಿ ಹಾಗೂ ಕಾಲಬದ್ದವಾಗಿ ಅನುಷ್ಟಾನಗೊಳಿಸುವುದು.